# ದ್ವೈತ ಸಂವಿಧಾನ

| | |
|---|---|
| ಕರ್ತೃ | ಶ್ರೀಮನ್ನಾರಾಯಣ |
| ಬರೆದ ಕಾಲ | ಅನಾದಿ |
| ಸಂವಿಧಾನದ ಮೊದಲ ಪ್ರತಿ | ಬ್ರಹ್ಮದೇವರಿಗೆ |
| ಸಂವಿಧಾನದಲ್ಲಿ ಏನೇನಿದೆ? | ನಮ್ಮ ಮುಕ್ತಿಗೆ ಸಾಧನವಾದ ಮತ್ತು ನಮ್ಮ ತಪ್ಪನ್ನು ತಿದ್ದಿಕೊಳ್ಳುವ ಬಗೆ. |
| ಸಂವಿಧಾನದ ವಿವಿದ ಭಾಗಗಳು ಯಾವುವು? | ವೇದಗಳು, ಪುರಾಣಗಳು, ಉಪನಿಷತ್ತುಗಳು |
| ಸಂವಿಧಾನದ ಪ್ರಚಾರಕರಾರು? | ಶ್ರೀ ವೇದವ್ಯಾಸರೂಪಿ ಪರಮಾತ್ಮ |
| ಸಂವಿಧಾನಕ್ಕೆ ಅಪಾರ್ಥ ಮಾಡಿದವರಾರು? | ಶಂಕರ, ರಾಮಾನುಜಾದಿ ಅನ್ಯಪಂಥಗಳು |
| ಒಟ್ಟು ಎಷ್ಟು ಮಂದಿ ಸಂವಿಧಾನಕ್ಕೆ ತಪ್ಪು ಅರ್ಥಗಳನ್ನು ನೀಡಿದ್ದಾರೆ | ಒಟ್ಟು ೨೧ ಪಂತಗಳು |
| ಯಾರು ವೇದವ್ಯಾಸ ದೇವರ ಭಾವನೆಗೆ ಸಮ್ಮತವಾದ ಅರ್ಥವನ್ನು ಬರೆದರು | ಶ್ರೀಮಧ್ವಾಚಾರ್ಯರು |
| ಶ್ರೀಮದಾಚಾರ್ಯರ ಸಂಶೋಧಿತ ಸಂವಿಧಾನಕ್ಕೆ ಹೆಸರೇನು | ವೈಷ್ಣವ ಅಥವಾ ದ್ವೈತ ಸಂವಿಧಾನ |
| ಈ ಸಂವಿಧಾನದ ಮೂಲೋದ್ದೇಶ | ಮೋಕ್ಷಪ್ರಾಪ್ತಿ |

# ದಾಸರಾಯರು ಬರೆದ ಮಧ್ವರಾಯರ ಸಂವಿಧಾನ

1. ಪ್ರಾತಕಾಲದಲ್ಲೇ ಏಳಬೇಕು

ಪ್ರಾತ:ಕಾಲದ ನಿದ್ರೆ ಪರಿಹರಿಸಿ ಹರಿಯ ಸ್ಮರಿಸಿ
ನಾಥ ಗೋವಿಂದನಿಗೆ ಪ್ರದಕ್ಷಿಣೆ
ಪ್ರೀತಿಯೊಳತಿಥಿಯ ಪೂಜಿಸಿ ಪುರಾಣ ಶಾಸ್ತ್ರವ ಕೇಳಿ
ನಾಥ ಪುರಂದರ ವಿಟ್ಟಲನೇ ನಮೋ ಎನ್ನಿ।
ಭಾರತೀರಮಣ ಮುಖ್ಯಪ್ರಾಣಾಂತರ್ಗತ ನಾರಾಯಣಾಯ ನಮ:

## ೨. ಬೆಳಗ್ಗೆ ಏಳುತ್ತಲೇ ಶ್ರೀಹರಿಯನ್ನು ಸ್ಮರಿಸುತ್ತಲೇ ಏಳು

ಹರೇ ಗೋವಿಂದಾ ಎಂದೇಳು ಹತ್ತಾವತಾರ ಪೇಳು ।
ಮೂಡಲದೆಸೆಗೆ ನಡೆ ಗೋವಿಪ್ರ ತುಳಸಿಗೆ ಎರಗಿ ಬಂದು ।
ನೈರುತ್ಯದಲ್ಲಿ ತೃಣವನಿಟ್ಟು ಮಲ ಮೂತ್ರಂಗಳ ಬಿಟ್ಟು ।
ಗುರು ಪರಂಪರೆಯೆಂದು ಪುರಂದರವಿಟ್ಟಲನೆನ್ನು ।

3

## 4. ಮೃತ್ತಿಕಾಶೌಚ

ಮಲ ಮೂತ್ರ ಮಾಡುವಾಗ ಕರದಲ್ಲಿ ಜಲವಿರೆ
ಮಲಕೆ ಸಮಾನ ಅದು ಶುದ್ಧವಲ್ಲ
ವಿಲಸಿತ ಕರ್ಮವಾಚರಿಸಿ ಹರಿಯ
ನೆನೆಯ ಒಲಿವ ಪುರಂದರ ವಿಟ್ಟಲ ।

5

ನುಡಿವೆ ಲಿಂಗ ಶೌಚಕ್ಕೊಮ್ಮೆ ಗುದಕ್ಕೆ ಮೂರು
ನೆಲ್ಲಿಕಾಯಿಯಷ್ಟು ಮಣ್ಣ ಹಚ್ಚಿ
ನೀರೊಳು ತೊಳೆದು ಬಲದ ಕೈಗೆ ಐದು ಮಣ್ಣು
ಎಡದ ಕೈಗೆ ಏಳು ಮಣ್ಣು ಜೋಡು ಪಾದಕ್ಕೆ ಐದೈದು ಮಣ್ಣು
ಐದು ಕಡೆಯಲಿಟ್ಟು ಪುರಂದರವಿಟ್ಟಲ ಎನ್ನು ।

5. ದಂತಪ್ರಕ್ಷಾಲನ –

4

ಹಲ್ಲು ಬೆಳಗುವಲ್ಲಿ ಜಂಬು ಫಲಕ್ಷಪತ್ರೆ ನೆಲ್ಲನಿಲ್ಲು
ಮಹಾಲಯ ಪುಣ್ಯ ದಿವಸದಿ ಬಲ್ಲಿದ ಏಕಾದಶಿ
ಪರ್ವಣಿ ಅಮಾವಾಸ್ಯೆಯಲಿ ರವಿ ಶಶಿ ಗ್ರಹಣದಲಿ
ಸಲ್ಲದಯ್ಯ ದನ್ತಕಾಷ್ಟ ಮಲಿನಗಳಿಗೆ ಗಲ್ಲಿಸಿ
ನೀರ ಮುಕ್ಕುಳಿಸೆ ಹನ್ನೆರಡು ಬಲ್ಲ ಬುಧರಿಗೆ
ಪುರಂದರವಿಟ್ಟಲ ಒಲಿವ ಇದನಾಚರಿಸೆ ।

೬.ಸ್ನಾನ ಮಾಡಿರಿ, ಸ್ನಾನ ಕಾಲದಲ್ಲಿ ಸಂಕಲ್ಪ ಮಾಡಿರಿ

7

ಎರಡು ಗಳಿಗೆ ಬೆಳಗೆ ಇರಲು ಗ್ರಸ್ತಗೆ
ಸ್ನಾನ ಕರವ ಮುಗಿದು ಮಾಡು ಸಂಕಲ್ಪವೇದ
ಪರಮ ಪುಣ್ಯ ಬ್ರಾಹ್ಮಣ ಧರ್ಮವೆಂದು
ಪುರಂದರವಿಟ್ಟಲನ್ನು ಮೆಚ್ಚಿ ಪಾಲಿಸುವ

ಹೃದಯದ ಮಲವನ್ನು ತೊಳೆಯಲರಿಯದೆ
ತಾವು ಉದಯದಲೆದ್ದು ಮಿಂದು ಗಡಗಡ ನಡಗುವರು
ಅದರಿಂದೇನು ಫಲ ಅದಕ್ಕಿಂತ ಉದಯಾಸ್ತಮಾನ
ನೀರೊಳಗಿತ್ತ ಮುದಿಕಪ್ಪೆ ಮಾಡಿದ ತಪ್ಪೇನಯ್ಯ
ಪುರಂದರವಿಟ್ಟಲನ ನಾಮವ ನೆನೆಯದೆ
ದಿನಗೆ ಇನ್ನೂರು ಬಾರಿ ಮುಳುಗಿದರೇನಯ್ಯ ಫಲವು

(ಸ್ನಾನ ಕಾಲದಲ್ಲಿ ಸಂಕಲ್ಪ ಮಾಡಿ ಶ್ರೀಹರಿಯನ್ನು ನೆನೆಯದೆ ಮಾಡಿದರೆ ಫಲವಿಲ್ಲ. ಹಾಗೆ ಮಾಡಿದರೆ ಕಪ್ಪೆ-ಮೀನು-ಮೊಸಳೆಗಳು ಸದಾ ನೀರಿನಲ್ಲಿರುವಂತೆ ಸ್ನಾನದ ಫಲವಿರುವುದಿಲ್ಲ)

೭. ಗೋಪಿಚಂದನ ಧಾರಣ –

ಕೂಪದಲ್ಲಿಯಾದರು ಕೊಳದಲ್ಲಿಯಾದರು
ಪಾಪಿಯಲ್ಲಿಯಾದರು ಆ ಪತ್ನಿಯು ನೆರದಿದ್ದರು
ಗೋಪೀಚಂದನದ ಸಂಪರ್ಕವಿದ್ದರೆ
ಅದೇ ಸಂಧ್ಯಾಕಾಲವೆಂದು ಪುರಂದರವಿಟ್ಟಲ ಪೇಳ್ದ
8

9 Ü

**೮. ಗಾಯತ್ರಿ ಮಂತ್ರ ಜಪಕ್ರಮ –**

ಮಧ್ಯಾಂಗುಲೀಯ ಮೇಲೆ ಮಣಿಸರವಿಟ್ಟು ।
ಬದ್ಧ ಅಂಗುಟಾಗ್ರ ಎಣಿಸಬೇಕು ।
ಕಿರಿ ಅಂಗುಲಿ ಪಂಚ ಭೋಗಿಸಿ ಇರಬೇಕು ।
ಭದ್ರವಾಗಿ ನಿಲ್ಲಿಸಿ ನೀರು ಸೋರದೆ ಗಾಯತ್ರಿಯ

ಬುದ್ಧಿಪೂರ್ವಕದಿಂದ ಗೈಯುತಲಿರಬೇಕು ।
ಮುದ್ದು ಮೂರುತಿ ನಮ್ಮ ಪುರಂದರವಿಟ್ಟಲನ್ನ
ಎಂದೆಂದು ನೋಡುವ ಬಗೆ ಕಾಣಲು ಬೇಕು ।

ಬಿಡು ಮನುಜಾ ಈ ಜಪವು ಸಿದ್ಧಿಗೆ ಬಾರದು ।
ತೊಡೆಯ ಕೆಳಗೆ ಕೈ ಹಿಂದೆ ಮುಂದೆ ಕೈ ಚಾಚಿ
ಬಿಡುತ ಮಂತ್ರಾರ್ಥ ನೋಡದಲೆ ।
ಅಡಿಗಡಿಗೆ ಜಪವ ಮಾಡೆ ದೈತ್ಯರಿಗೆ ಆಹುದಯ್ಯ ।
ಒಡೆಯ ಪುರಂದರವಿಟ್ಟಲನ ಒಲಿಸಬೇಕಾದರೆ
ಹಿಡಿಯೋ ಈ ಪರಿ ಹೇಳಿದ ವಚನ ತತ್ವಗಳ।

ಅನಾಮಿಕಾಖ್ಯ ಮಧ್ಯದ ಎರಡನೆಯ ಗೆರೆಯಾದಿ
ಇನಿತು ಮಧ್ಯಾಂಗುಲಿ ಕೊನೆಗೆರೆ ಕೂಡಿಸಿ ।
ಮನಮೂರ್ತಿ ಪರಿಮಾಣ ಅಂಗುಷ್ಟದಿಂದಲಿ ।
ಎಣಿಸು ತರ್ಜನಿ ಮೂಲ ಪರಿಯಂತರ ।
ಘನ ಹತ್ತು ಗೆರೆ ಜಪ ಪುರಂದರವಿಟ್ಟಲಗೆ
ಮನದಿ ಅರ್ಚಿಸುತ ಗಾಯತ್ರಿ ಜಪವ ।

ಉದಯಕಾಲದ ಜಪ ನಾಭಿಗೆ ಸರಿಯಾಗಿ ।
ಹೃದಯಕ್ಕೆ ಸರಿಯಾಗಿ ಮಧ್ಯಾಹ್ನದಿ ।
ವದನಕ್ಕೆ ಸರಿಯಾಗಿ ಸಾಯಂಕಾಲಕ್ಕೆ ।

ಪದುಮನಾಭ ತಂದೆ ಪುರಂದರವಿಠಲಗೆ ।
ಇದೇ ಗಾಯತ್ರಿಯಿಂದ ಜಪಿಸಬೇಕೋ ।

೯. ಆಚಮನ –

ಹಲವು ಕರ್ಮಗಳಿಗೆ ಹವಣೆ ಎರಡಾಚಮನ ।
ಮಲ ಮೂತ್ರ ವಿಸರ್ಜನಕೆ ಮಾಡು ಮೂರು ।
ನಲಿದು ಉಂಡ ಮೇಲೆ ನಾಲ್ಕಾಚಮನ ।
ಲಲನೆಯ ಸಂಗಕ್ಕೆ ಐದಾಚಮನ ।
ಅಲ್ಲಿಂದೊಲಿವನು ಪುರಂದರವಿಟ್ಟಲ
ಆಚಮನವನು ಮಾಡೆ ।

ಆಕಳ ಕಿವಿಗೆ ಎಣೆ ಅಂಗೈ ಹಳ್ಳವಾಗಿರಬೇಕು
ಉದ್ದು ಮುಳುಗುವಂತೆ ಇರಬೇಕು।
ನೀರು ಸಾಕಾಗದೆ ಹೆಚ್ಚು ಕಡಮೆ ಸಾಕೆಂಬಷ್ಟು ಕುಡಿದರೆ
ಸಾಕಾರ ಪುರಂದರವಿಟ್ಟಲ ಮದ್ಯಸಮ ಮಾಡುವ ।
(ಆಚಮನ ಪ್ರಮಾಣ ಎಷ್ಟಿರಬೇಕು)

೧೦. ವಿಳ್ಳೆದೆಲೆ ದಾನ ಪ್ರಮಾಣ–

ಒಂದು ವಿಳ್ಳೆದೆಲೆಯು ವಿಪ್ರರಿಗೆಂದೆಂದು ಕೊಡಬಾರದು ।
ಎರಡೆಲೆ ಕೊಡಲು ಕಂದಿ ಹೋಗುವುದು ಭಾಗ್ಯ ।
ಮೂರೆಲೆ ಕೊಡಲು ಬಂದೊದಗುವುದು ಹಾನಿ ।

ಚಂದದಿಂದಲಿ ನಾಲ್ಕು ಐದೆಲೆ ತಂದು ಕೊಟ್ಟರೆ ।
ತಂದೆ ಪುರಂದರವಿಠಲ ವೈಕುಂಠ ಪದವೀಯನೀವ ।

೧೧. ಮನೆ ಹೇಗಿರಬೇಕು

ಮನೆಯಲ್ಲಿ ವಿಪ್ರ ಪಾದೋದಕದ ಹೆಸರಿಲ್ಲದಿದ್ದರೆ
ಮನೆಯಲ್ಲಿ ವೇದಶಾಸ್ತ್ರ ಧ್ವನಿ ಗರ್ಜಿಸದಿದ್ದರೆ।
ಮತ್ತೆ ಮನೆಯಲ್ಲಿ ಸ್ವಾಹಾಕಾರ ಸ್ವಧಾಕಾರ
ಮಾಡುವುದಿಲ್ಲದ್ದಿದರೆ
ಆ ಮನೆ ಸ್ಮಶಾನಗೆ ಸಮವೆಂಬ ಪುರಂದರವಿಟ್ಟಲ ।

1
೧೨. ಜಲಪಾನ

ಎಡದ ಕೈಯಿಂದ ನೀರ ಎತ್ತಿ ಬಲದ ಕೈಲಿಟ್ಟು ಕುಡಿದರೆ ।
ಆರಾದರಾಪೋಶನಗೆ ಮತ್ತದು ಮದ್ಯ ಎಡೆಯನ್ನ
ಗೋಮಾಂಸವೆಂದು।
ಶ್ರುತಿ ಸಾರುತಿದೆ ಪೊಡವಿಯಲ್ಲಿ ಪುರಂದರ ವಿಟ್ಟಲಾಜ್ಞೆ ।

೧೩. ಪರರ ಅನ್ನ

ಪರರನ್ನ ಉಂಡ ಬ್ರಾಹ್ಮಣರಿಗೆ ಇರದು ಮಾಡಿದ ಶುಭಕರ್ಮ ।
ಎರಡು ಮೂರು ಭಾಗಾನ್ನವಿತ್ತವನಿಗಯ್ಯ ಉದರದಲಿ ।
ಉಂಡ ಅನ್ನದೊಂದು ಭಾಗವುಳಿವುದು
ಪೊಡವಿಯಲ್ಲಿ ಪುರಂದರ ವಿಟ್ಟಲನು ಬಲ್ಲ ।

೧೪. ಅತಿಥಿ ಭೋಜನ –

ಶತ್ರುವಾಗಲಿ ಚೋರ ಚಂಡಾಲನಾಗಲಿ ।
ಪಿತೃ ಘಾತಕಿಯಾಗಲಿ ಪ್ರೀತಿ ಮಾಡಲು ಬೇಕು ।
ಅತಿಥಿಯಾಗಿ ಮಧ್ಯಾಹ್ನ ಕಾಲದಿ ಅವ ಬಂದು ಉಂಡರೆ ।
ಸ್ವರ್ಗವೀವ ಪುರಂದರವಿಟ್ಟಲ ವೈಕುಂಟವನೀವ ।

5

೧೫. ದ್ವೈತ ತತ್ತ್ವ

ಜೀವ ಜೀವಕೆ ಭೇಧ ।
ಜಡ ಜಡಕೆ ಭೇದ ।
ಜೀವ ಜಡ ಪರಮಾತ್ಮನಿಗೆ ಭೇದ ।
ಜೀವಾಜೀವ ಮುಕ್ತಾಮುಕ್ತರ ಭೇದ ।
ಸಂಸಾರದೊಳು ಭೇದ ।
ಮುಕ್ತರೊಡೆಯ ಹರಿ ಭಕ್ತರಾಧೀನ ।
ಜಗತ್ಕರ್ತ ನೀ ಸಲಹಯ್ಯ ಪುರಂದರವಿಠಲ ।

**೧೬.** ಪಾಪಗಳ ಪರಿಹಾರ ಮಾರ್ಗ –

ಶ್ರವಣದಿಂದ ಹೋಯಿತು ಬ್ರಹ್ಮಹತ್ಯಾಪಾಪವು ।
ಸ್ಮರಣೆಯಿಂದ ಹೋಯಿತು ಸೇರಿದ್ದ ಪಾಪವು ।
ಎಲ್ಲಿದ್ದ ಅಜಾಮಿಳ ಎಲ್ಲಿತ್ತು ವೈಕುಂಠ ।
ಕೊಟ್ಟಾತನೇ ಬಲ್ಲ ಪುರಂದರವಿಠಲ ।

೧೬. ಮಾಡಬಾರದ್ದು

ಅಲ್ಲದ ಕರ್ಮವ ಆಚರಿಸಿದವ ಕೆಟ್ಟ ।
ಎಲ್ಲರೊಳಗೆ ವಿರೋಧಿಸಿದವ ಕೆಟ್ಟ ।
ಬಲ್ಲಿದವರೊಡನೆ ಸೆಣಸಾಡುವ ಕೆಟ್ಟ ।
ನಲ್ಲೆ ಮಾತಿನ ಸತಿಯ ನಂಬಿದವ ಕೆಟ್ಟ ।
ಪುಲ್ಲನಾಭ ನಮ್ಮ ಪುರಂದರ ವಿಠಲನ ।
ಮೆಲ್ಲಡಿ ನಂಬದವ ಕೆಟ್ಟ ನರಗೇಡಿ ।

**೧೭. ಕಾಲನಿಯಾಮಕ ಭಗವಂತನ ಸ್ಮರಣೀಯ ರೂಪ –**

| | |
|---|---|
| **ಅ. ಪ್ರಾತಕಾಲದಲ್ಲಿ** | **ಶ್ರೀ ಕೇಶವಾಯನಮ :** |
| **ಆ. ಮಧ್ಯಾಹ್ನ** | **ಶ್ರೀ ವಿಷ್ಣವೇ ನಮ:** |
| **ಇ. ಸಾಯಂಕಾಲದವರೆಗೆ** | **ಶ್ರೀ ಮಧುಸೂಧನಾಯನಮ:** |
| **ಈ. ಸಾಯಂಕಾಲ** | **ಶ್ರೀ ಮಧುನಾಮಕ ಪರಮಾತ್ಮ** |
| **ಉ. ರಾತ್ರಿಯ ಆರಂಭ** | **ಶ್ರೀ ಹೃಷೀಕೇಶಾಯನಮ:** |
| **ಊ. ಸಂಗಮಕಾಲದಲ್ಲಿ** | **ಶ್ರೀ ಗೋವಿಂದಾಯ ನಮ:** |
| **ಋ. ರಾತ್ರಿ** | **ಶ್ರೀ ಪದ್ಮನಾಭಾಯ ನಮ:** |